

# ಲ್ಯಾಂಡ್‌ಸ್ಕೇಪ್ ಗಾರ್ಡನಿಂಗ್



ಮನೆಯ ಮುಂದೆ ಪುಟ್ಟದೊಂದು ಜಾಗ ಇದ್ದರೆ, ನಿಮ್ಮ ಮನೆಯ ಸೌಂದರ್ಯವನ್ನು ಇಮ್ಮಡಿಸುವ ಪುಟ್ಟ ಲ್ಯಾಂಡ್‌ಸ್ಕೇಪ್ ಗಾರ್ಡನ್ ಸುಲಭವಾಗಿ ಮಾಡಿಕೊಳ್ಳಬಹುದು.

★ ಚಿತ್ರ- ಲೇಖನ: ಗೀತಸದಾ, ಮೋಂತಿಮಾರು.

ಮನೆಯ ಮುಂದೆ ಸುಂದರ ಉದ್ಯಾನವಿದ್ದರೆ ಮನೆಯ ಸೌಂದರ್ಯ ಇಮ್ಮಡಿಗೊಳ್ಳುವುದಷ್ಟೇ ಅಲ್ಲ ಮನಸ್ಸಿಗೂ ಹಿತ. ಎಲ್ಲೋ ಜಾಗದಲ್ಲಿ ಯಾವುದೋ ಗಿಡ ನಮಗಿಷ್ಟ ಬಂದ ರೀತಿಯಲ್ಲಿ ನೆಟ್ಟು ಬೆಳೆಸಿದರೆ ಅದು ಕೇವಲ ಉದ್ಯಾನ. ಆದರೆ, ಅದನ್ನೇ ಕಲಾತ್ಮಕವಾಗಿ, ಯೋಜನಾಬದ್ಧವಾಗಿ ರೂಪಿಸುವುದೇ ಲ್ಯಾಂಡ್ ಸ್ಕೇಪಿಂಗ್ ಗಾರ್ಡನ್‌ನ ವಿಶೇಷ . ಮನೆಯ ಹೊರಾಂಗಣ ವಿನ್ಯಾಸದ ವೇದಿಕೆ ಮೇಲೆ ತೋಟಗಾರಿಕೆ ಮತ್ತು ಗಾರ್ಡನಿಂಗ್ ಚಟುವಟಿಕೆಯನ್ನು ಒಳಗೊಂಡ ವೃತ್ತಿಯೇ ಲ್ಯಾಂಡ್ ಸ್ಕೇಪಿಂಗ್ ಆರ್ಕಿಟೆಕ್ಚರ್.

'ಆಧುನಿಕ ಯುಗದಲ್ಲಿ ಎಲ್ಲವೂ ಪ್ಲಾನಿಂಗ್. ಮನೆ ಕಟ್ಟುವಾಗ ಹೇಗೆ ಪ್ಲಾನ್ ಮಾಡುತ್ತೇವೆಯೋ ಅದೇ ರೀತಿ ಗಾರ್ಡನ್‌ಗೂ ಪ್ಲಾನ್ ಮಾಡಿದರೆ ಯೋಜಿತ ಸುಂದರ ಉದ್ಯಾನದ ಒಡೆಯರು ನೀವಾಗಬಹುದು' ಎನ್ನುತ್ತಾರೆ ಬೆಳ್ಳಾರೆಯ ಕುರಿಯಾಜೆ ತಿರುಮಲೇಶ್ವರ ಭಟ್.

'ಕೃಷಿ ಪಂಡಿತ' ಪ್ರಶಸ್ತಿ ಪುರಸ್ಕೃತರಾದ ಶ್ರೀಯುತರಿಗೆ ಗಾರ್ಡನಿಂಗ್ ಒಂದು ಹವ್ಯಾಸ. ತಮ್ಮ ಮನೆಯ ಮುಂದೆ ತಮ್ಮ ಕಲ್ಪನೆಗೆ ಅನುಗುಣವಾಗಿ ಸುಂದರ ಉದ್ಯಾನವನ್ನು ನಿರ್ಮಿಸಿರುವ ತಿರುಮಲೇಶ್ವರ ಅವರು ಲ್ಯಾಂಡ್‌ಸ್ಕೇಪಿಂಗ್ ಬಗ್ಗೆ ಅಪಾರ ಮೋಹ ಹೊಂದಿದ್ದಾರೆ.

'ಲ್ಯಾಂಡ್ ಸ್ಕೇಪಿಂಗ್ ಮಾದರಿಯ ಉದ್ಯಾನವೆಂದರೆ ಕೇವಲ ಗಿಡಗಳನ್ನು ನೆಡುವುದಷ್ಟೇ ಅಲ್ಲ, ಇದರಲ್ಲಿ ಕಲೆ, ಪ್ಲಾನಿಂಗ್, ಇಕಾಲಜಿ ಎಲ್ಲವೂ ಅಡಕವಾಗಿರುತ್ತದೆ. ಈ ರೀತಿಯ ಉದ್ಯಾನದಲ್ಲಿ ಅತಿ ಸಣ್ಣ ಸ್ಥಳವನ್ನೂ ಕಲಾತ್ಮಕ ರೀತಿಯಲ್ಲಿ ಯೋಜಿಸಿ, ಆಕರ್ಷಕವಾಗಿ ಪರಿವರ್ತಿಸಿ, ಸಣ್ಣ ಗಾರ್ಡನ್‌ಅನ್ನೂ ದೊಡ್ಡದಾಗಿ ಕಾಣುವಂತೆ ಮಾಡಿ ಅದ್ಭುತ ಲೋಕವನ್ನೇ ಸೃಷ್ಟಿಸಬಹುದು. ವಿವಿಧ ವಿನ್ಯಾಸದಲ್ಲಿ ಶಿಲೆಕಲ್ಲುಗಳು ಮತ್ತು ಹಸಿರು ಹುಲ್ಲು ಬೆಳೆಸಿ ನಡುನಡುವೆ ಅಲಂಕಾರಿಕ ವಸ್ತುಗಳನ್ನು ಇಟ್ಟು ಅಂದಗೊಳಿಸಬಹುದು' ಎನ್ನುತ್ತಾರೆ ಅವರು.

ಇದರಲ್ಲಿಯೂ ಸುಂದರ ಮೂರ್ತಿಗಳನ್ನು ಇಡುವ ಝೆನ್ ಗಾರ್ಡನ್, ಸೇತುವೆಯುಳ್ಳ ಜಪಾನೀಸ್ ಗಾರ್ಡನ್, ಜಲಪಾತ, ಕೃತಕ ಕೊಳಗಳು ಹೀಗೆ ಹಲವಾರು ರೀತಿಯಲ್ಲಿ ಗಾರ್ಡನನ್ನು ನಿರ್ಮಿಸಿ ನಿಮ್ಮ ಮನೆಯ ಮುಂದೆ ಸುಂದರ ಲೋಕವನ್ನೇ ನಿರ್ಮಿಸಬಹುದು. ಪೇಟೆ ಪಟ್ಟಣದಲ್ಲಿ ಇದ್ದುಕೊಂಡು ಸ್ಥಳಾವಕಾಶ ಕಡಿಮೆ ಇರುವವರಿಗಂತೂ ಲ್ಯಾಂಡ್ ಸ್ಕೇಪಿಂಗ್ ಮಾದರಿಯ ಗಾರ್ಡನ್ ವರದಾನವೆಂದೇ ಹೇಳಬಹುದು.

ಇಲ್ಲಿ ಆಯಾಯ ಸ್ಥಳಗಳಿಗೆ ಅನುಗುಣವಾಗಿ ಮತ್ತು ಮನೆಯವರ ಅಭಿರುಚಿ, ಕಲ್ಪನೆಗೆ ತಕ್ಕಂತೆ ಉದ್ಯಾನ ನಿರ್ಮಾಣ ಮಾಡಲಾಗುತ್ತದೆ. ಮೊತ್ತಮೊದಲನೆದಾಗಿ ಆಯ್ಕೆಯಾದ ಸ್ಥಳವನ್ನು ನಿರ್ಮಾಣಕ್ಕೆ ಬೇಕಾದ ರೀತಿಯಲ್ಲಿ ಸಜ್ಜುಗೊಳಿಸುವಾಗ ಮಣ್ಣನ್ನು ಅಗೆದು ಗೆದ್ದಲು ಬಾರದ ಹಾಗೆ ಕ್ರಿಮಿನಾಶಕವನ್ನು ಸಿಂಪಡಿಸಿ ನಂತರ ಮರಳು ಮತ್ತು ಮಣ್ಣನ್ನು ಮಿಶ್ರ ಮಾಡುತ್ತಾರೆ. ಆಮೇಲೆ, ವಿನ್ಯಾಸಕ್ಕೆ ಅನುಗುಣವಾಗಿ ಗಿಡ, ಮರ, ಬಳ್ಳಿಗಳನ್ನು ನಾಟಿ ಮಾಡುತ್ತಾರೆ. ಇದಕ್ಕಾಗಿ ಕುಂಡಗಳಲ್ಲಿ ಹಲವಾರು ನಮೂನೆಯ ಗಿಡಗಳನ್ನು ಮೊದಲೇ ತಯಾರು ಮಾಡಿಡುತ್ತಾರೆ.

'ಈ ರೀತಿಯ ಉದ್ಯಾನವನದ ನಿರ್ಮಾಣಕ್ಕೆ ಬೇಸಿಗೆ ಕಾಲವೇ ಸೂಕ್ತ. ಮಳೆಗಾಲದಲ್ಲಿ ನೆಲದ ಮಣ್ಣು ನೀರು ಬಿದ್ದು ಮೃದುವಾಗಿರುವುದರಿಂದ ಉದ್ಯಾನಕ್ಕೆ ಬೇಕಾದ ಆಕಾರ ಕೊಡಲು ಸಾಧ್ಯವಾಗದು. ಅಲ್ಲದೇ ಲಾನ್ ಇತ್ಯಾದಿ ಗಿಡಗಳನ್ನು ನಾಟಿ ಮಾಡಿದರೂ ಕೊಳೆತು ಹೋಗುವ ಸಾಧ್ಯತೆ ಹೆಚ' ಅನ್ನುವುದು ತಿರುಮಲೇಶ್ ಅವರ ಅಭಿಪ್ರಾಯ. ಲ್ಯಾಂಡ್‌ಸ್ಕೇಪಿಂಗ್ ಗಾರ್ಡ್‌ನ್‌ಅನ್ನು ಹಲವಾರು ನಮೂನೆಗಳಲ್ಲಿ ನಿರ್ಮಿಸಬಹುದು.

★ *ಆಕರ್ಷಕ ಫೇವಿಂಗ್ಸ್ ಮತ್ತು ಡೆಕ್ಸ್ ಮಾದರಿ*

ಉದ್ಯಾನದ ಸಮತಟ್ಟನ್ನು ಮಣ್ಣು ಹಾಕಿ ಸ್ವಲ್ಪ ಜಾಗದಲ್ಲಿ ಎತ್ತರಿಸಿ ಆಕರ್ಷಕ ಫೇವಿಂಗ್ಸ್ ಮತ್ತು ಡೆಕ್ಸ್ ಆಗಿ ಪರಿವರ್ತಿಸಿದರೆ ಗಾರ್ಡನ್ ದೊಡ್ಡದಾಗಿ ಕಾಣುವುದರ ಜೊತೆಗೆ ಒಳ್ಳೆಯ ನೋಟವನ್ನೂ ನೀಡುತ್ತದೆ.